ಓ ಎಸ್ ನಂ.140/2014

ಡಿ ಡಬ್ಲ್ಯೂ1

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ದಿನಾಂಕಃ 18-02-2019.

ಮುಂದುವರೆದ ಪಾಟೀ ಸವಾಲುಃ- ಶ್ರೀ ಎಸ್ ಎಸ್ ಪಿ ವಾದಿ ಪರ ವಕೀಲರಿಂದ :

ನಿಪಿ-21 ಕ್ರಯಪತ್ರದಲ್ಲಿ ವಾದಿಯ ತಂದೆ ತಿಮ್ಮೇಗೌಡರು ಆಸ್ತಿಯ ಉತ್ತರಕ್ಕೆ ಲಕ್ಕೇಗೌಡ ಮನೆ ಎಂದು ನಮೂದಿಸಿದ್ದು ಆ ಕಾರಣ ಸದರಿ ದಾಖಲೆಯನ್ನು ಹಾಜರುಮಾಡಿದ್ದೇನೆ . ಸದರಿ ಕ್ರಯಪತ್ರದ ಸಮಯದಲ್ಲಿ ಕೆರೆಚಿಕ್ಕೇನಹಳ್ಳಿ ಗ್ರಾಮ ಚನ್ನರಾಯಪಟ್ಟಣ ನಗರಕ್ಕೆ ಹೊಂದಿಕೊಂಡಂತೆ ಇತ್ತು ಎಂದರೆ ಸರಿಯಲ್ಲ. ಈಗಲೂ ಸಹ ಸದರಿ ಗ್ರಾಮ ಚನ್ನರಾಯಪಟ್ಟಣಕ್ಕೆ ಹೊಂದಿಕೊಂಡಂತೆ ಇದೆ ಎಂದರೆ ಸಾಕ್ಷಿಯು ಮನೆಗಳು ಆಗಿರುವುದರಿಂದ ಆ ರೀತಿ ಕಾಣಿಸುತ್ತದೆ ಎಂದು ನುಡಿಯುತ್ತಾರೆ . ಕ್ರಯಪತ್ರದ ಸಮಯಲ್ಲಿ ದಾವಾ ಸ್ವತ್ತಿನ ಮನೆಯಲ್ಲಿ ಚನ್ನರಾಯಪಟ್ಟಣದ ಲಕ್ಕೇಗೌಡರು ಬಾಡಿಗೆ ದಾರರಾಗಿ ವಾಸವಾಗಿದ್ದರೂ ಎಂಬುವುದು ಸರಿಯಲ್ಲ. ಸದರಿ ಲಕ್ಕೇಗೌಡರು ಈಗ ಪೌತಿಯಾಗಿದ್ದಾರೆಂದರೆ ಸರಿಯಲ್ಲ. ಸದರಿ ಲಕ್ಕೇಗೌಡರು ನಮ್ಮ ತಂದೆಯಾಗಿದ್ದು ಈಗಲೂ ಜೀವಿತ ಇದ್ದಾರೆ . ಸದರಿ ಲಕ್ಕೇಗೌಡ ನಮ್ಮ ತಂದೆ ಅಲ್ಲ ಎಂದರೆ ಸರಿಯಲ್ಲ.

ಕೆ ಎಲ್ ರಂಗಸ್ವಾಮಿ ಬಿನ್ ಲಕ್ಕೇಗೌಡ ನಾನೇ ಆಗಿರುತ್ತೇನೆ . ಸದರಿ ಹೆಸರಿನಲ್ಲಿ ನಮ್ಮ ಗ್ರಾಮದಲ್ಲಿ ಬೇರೆಯವರು ಇರುವ ಬಗ್ಗೆ ಗೊತ್ತಿಲ್ಲ. ನಿಡಿ-21 ಕ್ರಯಪತ್ರಕ್ಕೆ ಸಾಕ್ಷಿದಾರನಾಗಿ ದೊಡ್ಡಪ್ಪನ ಹೇಳಿಕೆ ಮೇರೆಗೆ ಸಹಿ ಮಾಡಿದ್ದೇನೆ . ಸಮ್ಮತಿ ಮೇರೆಗೆ ಸದರಿ ಕ್ರಯಪತ್ರಕ್ಕೆ ಸಹಿ ಮಾಡಿಲ್ಲ . ಬದಲಾಗಿ ದೊಡ್ಡಪ್ಪನ ಹೇಳಿಕೆ ಮೇರೆಗೆ ಸಹಿ ಮಾಡಿದ್ದೇನೆ . ಸಾಕ್ಷಿದಾರನಾಗಿ ಸಮ್ಮತಿಯ ಮೇರೆಗೆ ಸಹಿ ಮಾಡಿರುವ ವಿಷಯ 1990 ರಿಂದ ಗೊತ್ತಿದೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಜವಾಬ್ದಾರಿಯನ್ನು ದೊಡ್ಡಪ್ಪನೇ ನೋಡಿಕೊಳ್ಳುತ್ತಿದ್ದರಿಂದ ಆತನ ಹೇಳಿಕೆ ಮೇರೆಗೆ ವಿಶ್ವಾಸದಿಂದ ಸಹಿ ಮಾಡಿದ್ದೇನೆ .

ನಿಡಿ-4 ವಿಲ್ ಪ್ರಕಾರ ದಾವಾ ಸ್ವತ್ತು ಸೇರಿ 7 ಗುಂಟೆ ಆಸ್ತಿ ನನಗೆ ಬಂದಿರುವ ಬಗ್ಗೆ ನಿಡಿ-21 ರ ಕ್ರಯಪತ್ರದ ಚೆಕ್ಕುಬಂಧಿಯ ಉತ್ತರ ಭಾಗದಲ್ಲಿ ನನ್ನ ಹೆಸರು ಬರೆಸಿಕೊಳ್ಳಲು ತೊಂದರೆ ಇತ್ತಾ ಎಂದು ಕೇಳಲು ಸಾಕ್ಷಿಯು ಸದರಿ ಕ್ರಯಪತ್ರವನ್ನು ದೊಡ್ಡಪ್ಪನೇ ಬರೆಸಿದ್ದಾನೆಂದು ನುಡಿಯುತ್ತಾನೆ . 1967 ರಲ್ಲಿ ನಮ್ಮ ತಂದೆ ಹಾಗೂ ಆತನ ಸಹೋದರರ ಮಧ್ಯೆ ವಿಭಾಗವಾಗಿದೆ . ಸದರಿ ಕ್ರಯಪತ್ರಕ್ಕೆ ದೊಡ್ಡಪ್ಪನ ಹೇಳಿಕೆ ಮೇರೆಗೆ ಸಹಿ ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತು ವಿಲ್ ಅಥವಾ

ಯಾವುದೇ ದಾಖಲೆ ಮೂಲಕ ನನ್ನ ಪಾಲಿಗೆ ಬರದೇ ಇರುವುದರಿಂದ ಕ್ರಯಪತ್ರದಲ್ಲಿ ದಾವಾ ಸ್ವತ್ತಿನ ಬಗ್ಗೆ ಹಾಗೂ ಚೆಕ್ಕುಬಂಧಿಯಲ್ಲಿ ನನ್ನ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದು ಸಮ್ಮತಿಯಿಂದ ಎಲ್ಲಾ ವಿಚಾರ ತಿಳಿದುಕೊಂಡು ಕ್ರಯಪತ್ರಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿದ್ದೇನೆಂದರೆ ಸರಿಯಲ್ಲ . ಕ್ರಯಪತ್ರದಲ್ಲಿ ನಮೂದಿಸಿರುವ ಲಕ್ಕೇಗೌಡ ನಮ್ಮ ತಂದೆ ಎಂದು ಹೇಳಿ ಸುಳ್ಳು ವಿಷಯ ಸಾದನೆಮಾಡುತ್ತಿದ್ದೇನೆಂದರೆ ಸರಿಯಲ್ಲ.

ನಿಡಿ-21 ರ ಖರೀದಿದಾರರಾದ ವೆಂಕಟಪ್ಪ ರವರು ಈಗ ಸದರಿ ಆಸ್ತಿಯನ್ನು ವಾದಿಯ ದೊಡ್ಡಮ್ಮನ ಮಗ ಶಿವೇಗೌಡರವರಿಗೆ ಮಾರಾಟಮಾಡಿದ್ದಾರೆ . ಶಿವೇಗೌಡರ ಆಸ್ತಿಯ ಖಾತಾ ಉತ್ತಾರ್ ನಲ್ಲಿ ಆಸ್ತಿಯ ಉತ್ತರಕ್ಕೆ ತಿಮ್ಮೇಗೌಡರ ಮನೆ ಎಂದು ನಮೂದಿಸಲಾಗಿದೆ ಎಂದರೆ ನಾನು ನೋಡಿಲ್ಲ. ನಿಡಿ-14 ವಿಧ್ಯುತ್ ಬಿಲ್ ಯಾವ ಸಾಲಿನದು ಎಂಬುವುದು ಗೊತ್ತಿಲ್ಲ. ವಿಧ್ಯುತ್ ಸಂಪರ್ಕ ನೀಡುವ ಮುಂಚೆ ಸಂಬಂಧಪಟ್ಟ ಆಸ್ತಿಯ ದಾಖಲೆಗಳನ್ನು ಪಡೆಯುತ್ತಾರೆಂದರೆ ಸಾಕ್ಷಿಯು ಮುಂಚೆ ಪಡೆಯುತ್ತಿರಲಿಲ್ಲ ಈಗ ಪಡೆಯುತ್ತಿದ್ದಾರೆಂದು ನುಡಿಯುತ್ತಾರೆ . ಸಂಪರ್ಕ ಪಡೆಯುವ ಮುಂಚೆ ಎಲ್ಲಾ ಅವಶ್ಯಕ ದಾಖಲೆಗಳನ್ನು ಪಡೆಯುತ್ತಾರೆಂದರೆ ಸರಿಯಲ್ಲ.

ದಾವಾ ಸ್ವತ್ತು ಸರ್ವೆ ನಂಬರ್ 49ಃ2 ರಲ್ಲಿ ಇದೆ ಎಂದರೆ ಸರಿ . ನಿಡಿ-14 ಪ್ರಕಾರ ಸರ್ವೆ ನಂ.50ಃ2 ರ ಪಹಣಿ ನೀಡಿ ವಿಧ್ಯುತ್ ಸಂಪರ್ಕ ಪಡೆದಿದ್ದೇವೆಂದರೆ ಸಾಕ್ಷಿಯು ನೀಡಿರಬಹುದು ಎಂದು ನುಡಿಯುತ್ತಾರೆ . ದಿನಾಂಕ 15-2-2019 ರಂದು ಮಾಹಿತಿ ಹಕ್ಕು ಅಡಿಯಲ್ಲಿ ಅರ್ಜಿ ಸಲ್ಲಿಸಿ ವಾದಿ ಮಾಹಿತಿ ಪಡೆದಾಗ ಸದರಿ ವಿಷಯ ಗೊತ್ತಾಗಿದೆ ಎಂದರೆ ಸರಿಯಲ್ಲ. ಮಾಹಿತಿ ಹಕ್ಕು ಅಡಿಯಲ್ಲಿ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಗ್ರಾಮದಲ್ಲಿ ಬಿದ್ದುಹೋಗಿರುವ ಹಳೇಯ ಮನೆಗಳ ದಾಖಲೆಗಳನ್ನು ನೀಡಿ ವಿಧ್ಯುತ್ ಸಂಪರ್ಕ ಪಡೆದಿದ್ದೇನೆಂದರೆ ಸರಿಯಲ್ಲ. ವಿದುತ್ಯ್ ಬಿಲ್ ನಲ್ಲಿ ಮಾತ್ರ ನಮ್ಮಹೆಸರಿನಲ್ಲಿ ದಾಖಲೆಯಾಗಿದ್ದು ಮೂಲ ದಾಖಲೆಗಳಲ್ಲಿ ಈಗಲೂ ಸಹ ಸದರಿ ಸಂಪರ್ಕ ಲಕ್ಕೇಗೌಡ ಬಿನ್ ಲಕ್ಕ್ಮೇಗೌಡ ಎಂಬುವವರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ತಪ್ಪಾಗಿ ನಮೂದಾಗಿದೆ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿದ್ದೇವೆಂದು ನುಡಿಯುತ್ತಾರೆ . ಸದರಿ ಲಕ್ಕೆಗೌಡರ ಮಗ ಲಕ್ಕೇಗೌಡ ಯಾರು ಎಂಬುವುದು ಗೊತ್ತಿಲ್ಲ. ದಾವಾ ಸಲ್ಲಿಸುವುದಕ್ಕಿಂತ ಹಿಂದಿನ ಅವಧಿಯ ವಿಧ್ಯುತ್ ಬಿಲ್ ಗಳನ್ನು ಹಾಜರುಮಾಡಲು ತೊಂದರೆ ಇಲ್ಲ. ನಿಡಿ-14 ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಈಗಲೂ ವಾದಿಯ ಹೆಸರಿನಲ್ಲಿದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಸ್ವಾಧೀನ ನಾವೇ ಹೊಂದಿದ್ದೇವೆಂದು ನುಡಿಯುತ್ತಾರೆ . ದಾವಾ ಆಸ್ತಿಯ ಪಹಣಿ ನೀಡಿ

ವಿದ್ಯುತ್ ಸಂಪರ್ಕ ಪಡೆಯಲು ತೊಂದರೆ ಇರಲಿಲ್ಲ. 2015 ರಲ್ಲಿ ಗ್ರಾಮಪಂಚಾಯಿತಿಗೆ ಸದಸ್ಯನಾಗಲು ಚುನಾವಣೆಗೆ ಸ್ಪರ್ಧಿಸಿದ್ದೆನು ಎಂದರೆ ಸರಿ . ಸಾಕ್ಷಿಗೆ ದಾಖಲೆ ತೋರಿಸಿದ್ದು ಸಾಕ್ಷಿಯು ಸದರಿ ದಾಖಲೆಯೇ ಚುನಾವಣೆಯ ಸಮಯದಲ್ಲಿ ಚುನಾವಣೆ ಇಲಾಖೆಗೆ ಸಲ್ಲಿಸಿದ ತನ್ನ ಅಭ್ಯರ್ಥಿ ಅರ್ಜಿ ಎಂದು ಒಪ್ಪಿಕೊಂಡಿರುತ್ತಾರೆ . ಕಾರಣ ಸದರಿ ದಾಖಲೆಯನ್ನು ನಿಪಿ೨ ಎಂದು ಗುರುತಿಸಲಾಯಿತು . ಸದರಿ ಅಭ್ಯರ್ಥಿಯ ಅರ್ಜಿ ಸಲ್ಲಿಸುವ ಸಮಯದಲ್ಲಿ ಹೊಂದಿರುವ ಸ್ಥಿರ ಮತ್ತು ಚರಸ್ತಿಗಳ ಬಗ್ಗೆ ಮಾಹಿತಿ ನಮೂದಿಸಬೇಕಾಗುತ್ತದೆಂದರೆ ಸರಿ . ನಿಪಿ೨ ರ ಅರ್ಜಿಯಲ್ಲಿ ನನ್ನ ಹೆಸರಿಗೆ ಯಾವುದೇ ಸ್ವಂತ ಆಸ್ತಿ ಇಲ್ಲ ಎಂದು ನಮೂದಿಸಲಾಗಿದೆ ಎಂದರೆ ಸರಿ . ನನ್ನ ಹೆಸರಿಗೆ ಯಾವುದೇ ಆಸ್ತಿ ಇಲ್ಲದೇ ಇರುವ ಕಾರಣ ಸದರಿ ವಿಷಯವನ್ನು ಅರ್ಜಿಯಲ್ಲಿ ನಮೂದಿಸಲಾಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಬಾಡಿಗೆದಾರನಾಗಿರವುದರಿಂದ ನಿಪಿ೨ ರ ಅರ್ಜಿಯಲ್ಲಿ ಆಸ್ತಿಯ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸಿಯಲ್ಲಿ ನಾನು ಬಾಡಿಗೆದಾರನಾಗಿದ್ದು ಯಾವುದೇ ಸಂಪುರ್ಣ ಅಧಿಕಾರ ಹೊಂದಿಲ್ಲ ಎಂದರೆ ಸರಿಯಲ್ಲ. ಸುಳ್ಳು ವಿಷಯಗಳನ್ನು ನಮೂದಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸ.ಇ.ಎ.ಒ.,**

**3ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**